ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ರವರು ನಿಯಮ–330ರ ಅಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ.

ವಿಷಯ : ಬೆಳಗಾವಿ ನಗರ ಪ್ರವೇಶಿಸುವಾಗ ವಾಹನಕ್ಕೆ ಪಾಸ್‌ಗಳನ್ನು ಹೊಂದಿರುವ ಗಣ್ಯಾತಿಗಣ್ಯರೂ ಸಹ ಟೋಲ್‌ಗಳಲ್ಲಿ ಗಂಟೆಗಟ್ಟಲೆ ಸಮಯ ವ್ಯಯಿಸಬೇಕಾದ ಅನಿವಾರ್ಯತೆ ಉಂಟಾಗುತ್ತಿದೆ, ರೈತರು ಹಾಗೂ ಜನಸಾಮಾನ್ಯರು ಟೋಲ್ ನಾಕಾ ಸಿಬ್ಬಂದಿಯಿಂದ ಪ್ರತಿದಿನ ತೊಂದರೆ ಅನುಭವಿಸುತ್ತಿದ್ದಾರೆ. ಅದರಲ್ಲಿಯೂ ಕಬ್ಬು ಬೆಳೆಯುವ ರೈತರು ಕಬ್ಬು ತುಂಬಿರುವ ಲಾರಿಗಳಲ್ಲಿ ಟೋಲ್‌ಗಳಲ್ಲಿ ಸಾಲುಗಟ್ಟಿ ನಿಂತು ಕಾಯುವುದರೊಂದಿಗೆ ಟೋಲ್ ಸಿಬ್ಬಂದಿಗಳೊಂದಿಗೆ ಜಗಳ ನಿತ್ಯದ ಗೋಳಾಗಿದೆ. ಈ ಬಗ್ಗೆ ಕಳೆದ ಅಧಿವೇಶನದ ಸಂದರ್ಭದಲ್ಲಿ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆದು ಸಮಸ್ಯೆ ವಿವರಿಸಿದಾಗ, ಮಾನ್ಯ ಸಚಿವರು ಪಾಸ್ ಹೊಂದಿರುವ ಹಾಗೂ ಪಾಸ್ ಅಗತ್ಯವಿಲ್ಲದ ಸ್ಥಳೀಯರಿಗೆ ಸುಗಮವಾಗಿ ಸಂಚಾರ ನಡೆಸಲು ಅನುಕೂಲವಾಗುವಂತೆ ಪ್ರತ್ಯೇಕ ಪಥದ ವ್ಯವಸ್ಥೆ ಮಾಡುವುದಾಗಿ ಆಶ್ವಾಸನೆ ನೀಡಿದ್ದರೂ ಸಹ, ಇಂದಿನವರೆಗೂ ಕಾರ್ಯಗತವಾಗದೆ, ಬವಣೆ ಅನುಭವಿಸುತ್ತಿರುವ ಶೋಚನೀಯ ವಿಚಾರವನ್ನು ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಬಯಸುತ್ತೇನೆ.

ಸರ್ಕಾರದ ಉತ್ತರ

ಬೆಳಗಾವಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಟೋಲ್ ಪ್ಲಾಜಾಗಳು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ರವರ ವ್ಯಾಪ್ತಿಗೆ ಒಳಪಟ್ಟಿದ್ದು, ಇಲ್ಲಿಯ ಎಲ್ಲಾ ಟೋಲ್ ಪ್ಲಾಜಾಗಳಲ್ಲಿ ಗಣ್ಯ ಮತ್ತು ಅತಿಗಣ್ಯರ ವಾಹನಗಳಿಗೆ ಹಾಗೂ ಆಂಬುಲೆನ್ಸ್‌ಗಳಿಗೆ ತಡೆರಹಿತ ಸಂಚಾರಕ್ಕಾಗಿ ಪ್ರತ್ಯೇಕ ಲೇನ್‌ಗಳನ್ನು ಒದಗಿಸಲಾಗಿದೆ ಎಂದು NHAI ರವರು ವರದಿಸಿರುತ್ತಾರೆ.

ಯೋಜನಾ ಅನುಷ್ಠಾನ ಘಟಕ, (NHAI) ಧಾರವಾಡ ರವರ ವ್ಯಾಪ್ತಿಗೆ ಬೆಳಗಾವಿ ಟೋಲ್ ಪ್ಲಾಜಾಗಳು ಒಳಪಟ್ಟಿದ್ದು, ಎಲ್ಲಾ ಟೋಲ್ ಪ್ಲಾಜಾಗಳಲ್ಲಿ ಫಾಸ್ಟ್ ಟ್ಯಾಗ್ ಅಳವಡಿಸಲಾಗಿದೆ. ಇದರಿಂದ ಕಾಯುವ ಸಮಯ ಮೂರು ನಿಮಿಷಗಳಿಗಿಂತ ಹೆಚ್ಚಿಲ್ಲ ಎಂದು NHAI ರವರು ವರದಿಸಿದ್ದಾರೆ. ಇದಲ್ಲದೆ ಟೋಲ್ ಪ್ಲಾಜಾ ನಿರ್ವಹಿಸುವ ಏಜೆನ್ಸಿಗೆ ಸುಗಮ ಸಂಚಾರವನ್ನು ಖಚಿತ ಪಡಿಸಿಕೊಳ್ಳಲು ನಿರ್ದೇಶನ ನೀಡಲಾಗಿದೆ ಎಂದು ವರದಿಸಿರುತ್ತಾರೆ.

ಭಾರತ ಸರ್ಕಾರ, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯದ ಗೆಜೆಟ್ ಅಧಿಸೂಚನೆ ದಿನಾಂಕ: 09.11.2010 ರಲ್ಲಿರುವಂತೆ ಟೋಲ್ ಪ್ಲಾಜಾಗಳಲ್ಲಿ ಹಾದುಹೋಗುವ ಎಲ್ಲಾ ವಾಹನಗಳಿಗೆ ಫಾಸ್ಟ್ ಟ್ಯಾಗ್ ಹೊಂದುವುದು ಕಡ್ಡಾಯವಾಗಿದ್ದು, ಇಲ್ಲಿ ಹಾದು ಹೋಗುವ ಎಲ್ಲಾ ವಾಹನಗಳು ಫಾಸ್ಟ್ ಟ್ಯಾಗ್ ಅಳವಡಿಸಿಕೊಂಡರೆ ನಂತರ ವ್ಯವಸ್ಥೆ ಸುಗಮವಾಗಲಿದೆ ಎಂದು NHAI ರವರು ವರದಿಸಿರುತ್ತಾರೆ. (ಗೆಜೆಟ್ ಅಧಿಸೂಚನೆ ಪ್ರತಿ ನೀಡಲಾಗಿದೆ)

(ಸಿ.ಸಿ.ಪಾಟೀಲ)
ಲೋಕೋಪಯೋಗಿ ಸಚಿವರು

ಸಂಖ್ಯೆ: ಲೋಇ 231 ಸಿಎನ್‌ಹೆಚ್ 2021 (ಇ)